ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೨೬೦೭ ಶಾಲಾ ಕಾಲೇಜುಗಳು ಮತ್ತು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ೨೫೫ ಮಹಿಳಾ ವಿದ್ಯಾರ್ಥಿ ನಿಲಯಗಳು ಇವೆ.

ಉಚಿತ ಪಠ್ಯ ಪುಸ್ತಕ ಹಾಗೂ ಬಟ್ಟೆಗಳ ಯೋಜನೆ

೫೫೯. ಶ್ರೀ ಶಿವಸಂಗಪ್ಪ, ಶಿದ್ದಪ್ಪ ಕಡ ಪಟ್ಟಿ (ಹುನಗುಂದ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಪಠ್ಯ ಪುಸ್ತಕ ಹಾಗೂ ಉಚಿತ ಬಟ್ಟೆಗಳಿಗಾಗಿ ಸರ್ಕಾರವು ಖರ್ಚು ಮಾಡಿದ ಹಣವೆಷ್ಟು ? (ಯೋಜನೆ ಪ್ರಾರಂಭದಿಂದ ಡಿಸೆಂಬರ್ ೮೭ರ ವರೆಗೆ ಪ್ರತಿ ವರ್ಷದ ಎರಡು ಬಾಬಿನ ಪ್ರತ್ಯೇಕ ವಿವರ ನೀಡುವುದು)

ಆ) ಹಳೆ ಪುಸ್ತಕಗಳು ಕಳೆದ ೨ ವರ್ಷಗಳಲ್ಲಿ ಎರಡು ಬಾರಿ ಉಪಯೋಗ ಮಾಡಿರುವುದರಿಂದ ಇನ್ನು ಬೇಕಾಗಿರುವ ಪಠ್ಯ ಪುಸ್ತಕಗಳನ್ನು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮುದ್ರಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

ಇ) ಹಾಗಿದ್ದಲ್ಲಿ ಹಳೆ ಪುಸ್ತಕಗಳನ್ನು ಪದೇ ಪದೇ ಉಪಯೋಗಿಸಿರುವ ಕಾರಣ ಸರ್ಕಾರಕ್ಕೆ ಉಳಿತಾಯವಾದ ಮೊತ್ತವೆಷ್ಟು ?

ಈ) ಉಚಿತ ಬಟ್ಟೆ ವಿತರಣೆಗಾಗಿ ಹೊರ ರಾಜ್ಯಗಳಿಂದ ಎಷ್ಟು ಬಟ್ಟೆ ಯಾವ ನಮೂನೆಯ ಹಾಗೂ ಯಾವ ದರದಿಂದ ಖರೀದಿಸಲಾಗಿದೆ? (ಯೋಜನೆಯ ಪ್ರಾರಂಭದಿಂದ ಡಿಸೆಂಬರ್ ೮೭ರವರೆಗೆ ಪ್ರತಿ ವರ್ಷದ ವಿವರ ಕೊಡುವುದು ?

ಉ) ಉಚಿತ ಸಮವಸ್ತ್ರಗಳ ಬಟ್ಟೆಯನ್ನು ಎನ್.ಟಿ.ಸಿ. ಕೈ ಮಗ್ಗ ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಪಡೆಯಲು ಸಾಧ್ಯವಾಗಿಲ್ಲವೇ ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ)

ವರ್ಷ	ಪಠ್ಯ ಪುಸ್ತಕಗಳು (ಲಕ್ಷ ರೂ.ಗಳಲ್ಲಿ)	ಉಚಿತ ವಸ್ತ್ರಗಳು (ಲಕ್ಷ ರೂ.ಗಳಲ್ಲಿ)
೧೯೮೫-೮೬	೪೧೧.೫೦	೧೨೧೭.೪೯
೧೯೮೬-೮೭	೩೯೦.೦೦	೭೮೨.೦೦
೧೯೮೭-೮೮	೪೬೨.೦೦	೯೧೭.೨೭

ಆ) ಹಿಂದಿನ ವರ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚಲಾದ ಪುಸ್ತಕಗಳನ್ನೂ ಹಿಂದಿರಿಗಿ ಪಡೆಯುವುದು ಮತ್ತು ಅವುಗಳನ್ನು ಶಾಲಾ ಗ್ರಂಥಾಲಯದಲ್ಲಿ ಕಾಯ್ದಿರಿಸುವುದು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ವರ್ಷದ ಅವಧಿಯಲ್ಲಿ ಅವುಗಳನ್ನೂ ಕಾಪು ದಾಸ್ತಾನಾಗಿ ಉಪಯೋಗಿಸಬಹುದು.

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲಾ

ಈ) ಹೊರ ರಾಜ್ಯಗಳಿಂದ ಪಡೆದ ಬಟ್ಟೆಗಳ ವಿವರಗಳನ್ನು ಲಗತ್ತಿಸಿದೆ(ಅನುಬಂಧ-೧)

ಉ) ಇದುವರೆವಿಗೆ ಉಚಿತ ಸಮವಸ್ತ್ರಗಳಿಗಾಗಿ ಬೇಕಾದ ಬಟ್ಟೆಯನ್ನು ಸಹಕಾರ ಸಂಸ್ಥೆಗಳ ಸಾಮರ್ಥ್ಯವನ್ನು ಅವಲಂಬಿಸಿ, ಕರ್ನಾಟಕ ಕೈ ಮಗ್ಗಗಳ ಅಭಿವೃದ್ಧಿ ಮಂಡಳಿ ಮತ್ತು ಕರ್ನಾಟಕ ಗ್ರಾಹಕರ ಸಹಕಾರ ಮಹಾಮಂಡಳಿ ಈ ಸಂಸ್ಥೆಗಳ ಮೂಲಕ ಎನ್.ಟಿ.ಸಿ. ಮತ್ತು ಕೈಮಗ್ಗ ಉತ್ಪಾದನೆಯನ್ನು ಕೊಳ್ಳುವ ವ್ಯವಸ್ಥೆ ಇದೆ. ಇಂತಹ ಅತಿ ಹೆಚ್ಚಿನ ಬಟ್ಟೆ ಬೇಡಿಕೆಯನ್ನು ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಪಡೆಯುವ ವ್ಯವಸ್ಥೆಯಾದಂತೆ ಕಾಣಲಿಲ್ಲ.

ಅನುಬಂಧ–೧

ವರ್ಷ	ಒಟ್ಟೆಯ ನಮೂನೆ	ಎಷ್ಟು ಬಟ್ಟೆ ಮಿಾಟರಿಂಗಳಲ್ಲಿ	ದರ ಪ್ರತಿ ಮಿಾಟರಿಗೆ ರೂ–ಪೈ	ಯಾವ ಮಿಲ್ಲಿನಿಂದ ಖರೀದಿಸಿರುವುದು(ಮಿಲ್ಲುಗಳ ಹೆಸರು)
೧	೨	೩	೪	೫
೧೯೮೫–೮೬				
	೧ ನೆವಿಬ್ಲೂ ಡ್ರಿಲ್ ಬಟ್ಟೆ	೨,೭೦,೧೨೭	೧೩–೪೪	ಎನ್. ಟಿ. ಸಿ. ನಾರ್ತ್ ರಾಜ್ಯ, ಮಹಾರಾಷ್ಟ್ರ
	೨ ,,	೧,೮೦,೧೫೬	೧೬–೭೬	ಎನ್.ಟಿ.ಸಿ. ಸೌತ್ ರಾಜ್ಯ ಮಹಾರಾಷ್ಟ್ರ
	೩ ,,	೧,೨೬,೯೦೦	೧೩–೪೪	ಪುನ್‌ಟಿಕ್ಸ್ (ಪಂಜಾಬ್, ರಾಜ್ಯ ಸರ್ಕಾರದ ಸೌಮ್ಯಕ್ಕೆ ಒಳಪಟ್ಟ ಸಂಸ್ಥೆ)
	೪ ,,	೯೫,೨೭೨	೧೩–೪೪	ಟಿ ಸಿ.ಟಿ.ಐ. (ತಮಿಳು ನಾಡು, ಸರ್ಕಾರದ ಕಂಟ್ರೋಲ್)
	೫ ಲಿಮನ್ ಯೆಲ್ಲೋ ಕೇಸ್‌ಮೆಂಟ್	೧,೫೦,೦೦೦	೧೦–೯೭	ಎನ್. ಟಿ. ಸಿ. (ಸೌತ್) ಮಹಾರಾಷ್ಟ್ರ
	೬ ,,	೧,೦೭,೭೮೪	೧೧–೦೩	ತಮಿಳುನಾಡು ಟೆಕ್ಸ್‌ಟೈಲ್ ಕಾರ್ಪೊರೇಷನ್, (ತಮಿಳುನಾಡು ಸರ್ಕಾರದ ಸೌಮ್ಯಕ್ಕೆ ಒಳಪಟ್ಟ ಸಂಸ್ಥೆ)
	೭ ,,	೨,೯೯,೫೮೦	೧೧–೦೩	ಟಿ.ಸಿ.ಟಿ.ಪಿ. ಈರೋಡ್
೧೯೮೬–೮೭				
	೧ ಕಾಕಿ ಕೇಸ್ ಮೆಂಟ್	೫,೨೫,೩೮೨½	೧೧–೦೦	ಟಿ.ಸಿ.ಟಿ.ಪಿ. ಈರೋಡ್
	೨ ನೇವಿಬ್ಲೂ	೪೦,೮೦೨	೧೩–೦೦	ಎನ್.ಸಿ.ಸಿ.ಎಫ್. ಬಾಂಬೆ
೧೯೮೭–೮೮				
	೧೯೮೭–೮೮ರಲ್ಲಿ ಹೊರ ರಾಜ್ಯಗಳಿಂದ ಯಾವ ಬಟ್ಟೆಯನ್ನೂ ಖರೀದಿಸಿರುವುದಿಲ್ಲ.			